# ತಿಂಡಿ ರಂಗಯ್ಯ



ಚಿತ್ರ: ವಿಜಯಕುಮಾರಿ ಆರ್.

ರಂಗಯ್ಯ
ಬಂದಿಹ
ತರ–ತರದ
ಸಿಹಿ–ಸವಿ
ತಿಂಡಿಗಳ
ತಂದಿಹ!

ಗುಳ್ಳಂಮ್‌ನುಗಲು
ಗುಲಾಮು ಜಾಮೂನು
ಬಾಯಲಿ
ನೀರೂರಿಸುವ
ಜಾಂಗೀರ್
ಮೈಸೂರು ಪಾಕು!

ಮನಸೂರೆ
ಗೊಂಡಿವೆ
ಜೀಲೇಬಿ....
ನೋಡಲ್ಲಿ
ರಸಗುಲ್ಲಾ
ರವೆ ಉಂಡೆ!

ರಂಗಯ್ಯನೆಂದ್ರೇ
ಚಿಣ್ಣರಿಗೆಲ್ಲಾ
ಅಚ್ಚು ಮೆಚ್ಚು
ತಿನಿಸುಗಳಲ್ಲಡಗಿದೆ
ಆತನ ಪ್ರೀತಿಯ
ಅಕ್ಕರೆ ಅಚ್ಚು.

■ **ಅಮರಯ್ಯಾ ಪತ್ರಿಮಠ, ಸುರಪುರ**

# ಉಬುಂಟು

ಮಾನವ ಶಾಸ್ತ್ರಜ್ಞರೋರ್ವರು ಒಮ್ಮೆ ಆಫ್ರಿಕಾದ ಬುಡಕಟ್ಟು ಜನಾಂಗದ ಮಕ್ಕಳಿಗೆ ಆಟವೊಂದನ್ನು ಆಡಿಸುತ್ತಿದ್ದರು.... ಅವರು ಸಿಹಿ ತಿಂಡಿಗಳ ಬುಟ್ಟಿಯೊಂದನ್ನು ಮರದ ಕೆಳಗಿರಿಸಿ ಮಕ್ಕಳೆಲ್ಲರೂ ಆ ವೃಕ್ಷದಿಂದ 100 ಮೀಟರ್ ದೂರದಲ್ಲಿ ನಿಲ್ಲುವಂತೆ ಮಾಡಿದರು. ನಂತರ, 'ಇಲ್ಲಿಂದ ಓಡಿ ಮೊದಲು ಸಿಹಿ ತಿಂಡಿಗಳ ಬುಟ್ಟಿಯನ್ನು ಯಾರು ತಲುಪುತ್ತಾರೋ ಅವರಿಗೆ ಅದು ಬಹುಮಾನ ರೂಪದಲ್ಲಿ ಲಭಿಸಲಿದೆ' ಎನ್ನುವ ಸೂಚನೆ ನೀಡಿ, 'ರೆಡಿ, ಸ್ಟೆಡಿ, ಗೋ...' ಎಂದು ಘೋಷಿಸಿದರು.

ಆ ಕ್ಷಣ ಮಕ್ಕಳೇನು ಮಾಡಿದರು ಗೊತ್ತೆ? ಅವರೆಲ್ಲರೂ ಒಬ್ಬರನ್ನೊಬ್ಬರ ಕೈಯನ್ನು ಪರಸ್ಪರ ಹಿಡಿದು ಮರದತ್ತ ಜೊತೆಯಾಗಿ ಓಡಿದರು ಮತ್ತು ಸಿಹಿತಿಂಡಿಯನ್ನು ಸಮನಾಗಿ ಹಂಚಿಕೊಂಡು ತಿಂದು ಸಂಭ್ರಮಿಸಿದರು!

'ಹೀಗೇಕೆ ಮಾಡಿದಿರಿ?' ಎಂದು ಮಾನವಶಾಸ್ತ್ರಜ್ಞರು ಕುತೂಹಲ ಭರಿತರಾಗಿ ಪ್ರಶ್ನಿಸಿದಾಗ ಆ ಎಳೆಯರೆಲ್ಲರೂ ಒಕ್ಕೊರಲಿನಿಂದ 'ಉಬುಂಟು' ಎಂದುತ್ತರಿಸಿದರು...!

'ಉಳಿದವರೆಲ್ಲರೂ ಜೋಲುಮೋರೆ ಹಾಕಿಕೊಂಡಿರುವಾಗ ಒಬ್ಬ ವ್ಯಕ್ತಿ ಮಾತ್ರ ಅದೆಂತು ಸಂಭ್ರಮಿಸಲು ಸಾಧ್ಯ?' ಎನ್ನುವುದವರ ಧೋರಣೆಯಾಗಿತ್ತು. ಅವರ ಭಾಷೆಯಲ್ಲಿ ಉಬುಂಟು ಎಂದರೆ 'ಎಲ್ಲರೊಡಗೂಡಿ ನಾನು' ಎಂದರ್ಥ. ಎಲ್ಲಾ ಜನಾಂಗಗಳಿಗೂ ಅನ್ವಯವಾಗುವ ಒಂದು ಪ್ರಬಲ ಸಂದೇಶವಿದಾಗಿದೆ!

ನಾವೆಲ್ಲರೂ ಈ ಸದ್ವರ್ತನೆಯನ್ನು ಮೈಗೂಡಿಸಿಕೊಂಡು ಎಲ್ಲೆಲ್ಲೂ ಸಂತಸ ಪಸರಿಸೋಣ; 'ಉಬುಂಟು' ಎನ್ನುವ ಈ ಸಹಬಾಳ್ವೆಯ ಜೀವನಶೈಲಿಯನ್ನು ನಮ್ಮದಾಗಿಸೋಣ.

(ಆಫ್ರಿಕಾ ಖಂಡದ ಕಥೆ)

■ **ರಮಣ್ ಶೆಟ್ಟಿ ರೆಂಜಾಳ್ ಮುಂಬೈ**



ಚಿತ್ರ: ಶಶಿಧರ್ ಹಳೇಮನಿ